AUGUST 10, 2024

AKASHAVANI - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- 'ಹರ್ ಘರ್ ತಿರಂಗಾ ಅಭಿಯಾನ' ಜನಾಂದೋಲನವಾಗಲಿ – ಪ್ರಧಾನಮಂತ್ರಿ ನರೇಂದ್ರ ಮೋದಿ, ಕರೆ.
- 'ಕ್ವಿಟ್ ಇಂಡಿಯಾ ಚಳವಳಿ' ಸ್ಮರಣೆ; ರಾಜ್ಯಾದ್ಯಂತ ವಿಧಾಯಕ ಕಾರ್ಯಕ್ರಮಗಳು.
- ಪ್ಯಾರಿಸ್ ಒಲಿಂಪಿಕ್ಸ್; ಭಾರತದ ಕುಸ್ತಿಪಟು ಅಮನ್ ಸಹರಾವತ್ ಕೊರಳಿಗೆ ಕಂಚಿನ ಪದಕ.
- ನಾಗರ ಪಂಚಮಿ ಹಬ್ಬ; ನಾಡಿನಾದ್ಯಂತ ಸಂಭ್ರಮ, ಸಡಗರದಿಂದ ಆಚರಣೆ.

<><><>

ಈಗ ವಾರ್ತೆಗಳ ವಿವರ

<><><>

'ಹರ್ ಘರ್ ತಿರಂಗಾ ಅಭಿಯಾನ'ವನ್ನು, ಸಾಮೂಹಿಕ ಚಳವಳಿಯನ್ನಾಗಿಸೋಣ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಅಭಿಯಾನದ ಹಿನ್ನೆಲೆ, ತಾವು ತಮ್ಮ ಪ್ರೊಫೈಲ್ ಚಿತ್ರವನ್ನು ಬದಲಾಯಿಸಿದ್ದು, ಎಲ್ಲರೂ ಕೂಡ ನಮ್ಮ ತ್ರಿವರ್ಣ ಧ್ವಜವನ್ನು ಹಾರಿಸಿ, ತಮ್ಮ ಸೆಲ್ಫಿಗಳನ್ನು har ghar tiranga.com ನಲ್ಲಿ ಹಂಚಿಕೊಳ್ಳುವಂತೆ, ಕೋರಿದ್ದಾರೆ.

<><><>

78 ನೇ ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು, ಹಾಗೂ 'ಹರ್ ಘರ್ ತಿರಂಗಾ' ಅಭಿಯಾನವನ್ನು, ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಕೈಗೊಳ್ಳುವ ಕುರಿತು, ಕೇಂದ್ರ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಹೊಸ ದಿಲ್ಲಿಯಿಂದ, ವರ್ಚುವಲ್ ವೇದಿಕೆಯಲ್ಲಿ ಪೂರ್ವಭಾವಿ ಸಭೆ ನಡೆಸಿದರು.

<><><>

ಗದಗ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ, ಇಬ್ಬರು ಸ್ವಯಂಸೇವಕ ವಿದ್ಯಾರ್ಥಿಗಳನ್ನು, ಪ್ರಧಾನಮಂತ್ರಿ ಮೋದಿ ಸ್ವಾತಂತ್ರ್ಯೋತ್ಸವದ ವಿಶೇ ’ ಅತಿಥಿಗಳಾಗಿ, ಹೊಸ ದಿಲ್ಲಿಗೆ ಆಹ್ವಾನಿಸಿದ್ದಾರೆ. ಸತೀಶ ಕನ್ನೇರ ಹಾಗೂ ಆದಿತ್ಯ ಗೊರವರ, ಎನ್.ಎಸ್.ಎಸ್. ಘಟಕದ ವತಿಯಿಂದ, ಗಮನಾರ್ಹ ಸೇವೆ ಸಲ್ಲಿಸಿದ್ದಾರೆ ಎಂದು, ಎನ್.ಎಸ್.ಎಸ್ ಜಿಲ್ಲಾ ನೋಡಲ್ ಅಧಿಕಾರಿ, ಶ್ರೀನಿವಾಸ ಬಡಿಗೇರ ತಿಳಿಸಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ, ವಿದ್ಯಾರ್ಥಿ ಆದಿತ್ಯ ಗೊರವರ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಆದಿತ್ಯ ಗೊರವರ ಧ್ವನಿ 38 ಸೆಕೆಂದುಗಳು

<><><>

ಎನ್.ಎಸ್.ಎಸ್. ಸ್ವಯಂಸೇವಕ ಸತೀಶ್ ಕನ್ನೇರ, ಆಕಾಶವಾಣಿಗೆ ತಮ್ಮ ಖುಷಿ ವ್ಯಕ್ತಪಡಿಸಿದ್ದಾರೆ.

<><><>

ಸತೀಶ ಕನ್ನೇರ ಧ್ವನಿ 30 ಸೆಕೆಂದುಗಳು

<><><>

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ ನಡೆದ, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ ಹೋರಾಟಗಾರರಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ನಮನ ಸಲ್ಲಿಸಿದ್ದಾರೆ. ಕ್ವಿಟ್ ಇಂಡಿಯಾ ಚಳವಳಿಯನ್ನು ಸ್ವಾತಂತ್ರ ್ಯ ಹೋರಾಟದ ಐತಿಹಾಸಿಕ ಕ್ಷಣ ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಬಣ್ಣಿಸಿದ್ದಾರೆ.

<><><>

ಕ್ವಿಟ್ ಇಂಡಿಯಾ ಚಳವಳಿಯ 82ನೇ ವರ್ಷಾಚರಣೆ ಹಿನ್ನೆಲೆ, ಧಾರವಾಡದ 99 ವ ’ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ರಂಗರಾವ್ ಕುಲಕರ್ಣಿ ಅವರನ್ನು, ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಜಿಲ್ಲಾಡಳಿತದ ಪರವಾಗಿ ಸನ್ಮಾನಿಸಿದರು.

<><><>

1942ರ ಕ್ವಿಟ್ ಇಂಡಿಯಾ ಚಳವಳಿ ಮತ್ತು ಗೋವಾ ವಿಮೋಚನೆಯಲ್ಲಿ ಭಾಗವಹಿಸಿದ್ದ, ದಕ್ಷಿಣಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ, 96 ವರ್ಷದ ಮಟ್ಟಾರು ವಿಠ್ಠಲ್ ಕಿಣಿ ಅವರನ್ನು, ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಸನ್ಮಾನಿಸಿದರು.

<><><>

ಸ್ವಾತಂತ್ರ್ಯ ಹೋರಾಟಗಾರರಾದ ಬೆಂಗಳೂರಿನ, ಎಸ್.ವಿ.ಟಿ ಗುಪ್ತಾ, ಶಂಕರನಾರಾಯಣ ರಾವ್, ನಾಗಭೂ ’ಣ್ ರಾವ್ ಹಾಗೂ ಕೆ.ಸಿ. ನಾರಾಯಣಪ್ಪ ಅವರನ್ನು, ಜಿಲ್ಲಾಧಿಕಾರಿ ಕೆ.ಎ. ದಯಾನಂದ ಮತ್ತು ರಾಜಭವನದ ವಿಶೇ ’ ಕಾರ್ಯದರ್ಶಿ ಆರ್. ಪ್ರಭುಶಂಕರ, ಸನ್ಮಾನಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಹುಬ್ಬಳ್ಳಿಯ ಕಲಾದಗಿ ಓಣಿಯ ನಾರಾಯಣ ಚೌಕಿನಲ್ಲಿ, ಭಾರತ ಬಿಟ್ಟು ತೊಲಗಿ ಎಂಬ ಬ್ರಿಟಿ ´ರ ವಿರುದ್ಧದ ಚಳವಳಿಯಲ್ಲಿ, ಬ್ರಿಟಿ ´ರ ಗುಂಡೇಟಿಗೆ ಹುತಾತ್ಮನಾದ ಬಾಲಕ, ನಾರಾಯಣ ಡೋಣಿ ಪುತ್ಥಳಿಗೆ, ಮಹಾಪೌರರಾದ ರಾಮಣ್ಣ ಬಡಿಗೇರ, ಉಪ ಮಹಾಪೌರರಾದ ದುರ್ಗಮ್ಮ ಬಿಜವಾಡ ಗೌರವಾರ್ಪಿಸಿದರು.

<><><>

ಕನ್ನಡ ನಾಡಿನ ರಾಣಿಯರು, ವಸಾಹತು ಶಾಹಿಗೆ ಸೊಪ್ಪು ಹಾಕಲಿಲ್ಲ; ಕನ್ನಡ ನಾಡಿನ ಅಸ್ಮಿತೆಯನ್ನು, ಕಿತ್ತೂರಿನ ಚನ್ನಮ್ಮಾಜಿ ಎಲ್ಲ ಅರಸರನ್ನು ಒಗ್ಗೂಡಿಸುವ ಮೂಲಕ ಕಾಯ್ದು, ಚಾರಿತ್ರಿಕ ಒಳನೋಟಗಳು, ಲಾವಣಿ ಪದ್ಯಗಳಲ್ಲೂ ಬಿಂಬಿತವಾಗಿವೆ ಎಂದು, ಡಾಂಡೇಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾಕ್ಟರ್ ವಿನಯಾ ನಾಯಕ ಹೇಳಿದರು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ, ಕ್ಯಾಪ್ಟನ್ ಬಿ. ಸಿ. ಕಲ್ಮಠ ಸ್ಮಾರಕ ದತ್ತಿ ಅಂಗವಾಗಿ, ರಾ.ಹ. ದೇಶಪಾಂಡೆ ಸಭಾ ಭವನದಲ್ಲಿ, 'ಕಿತ್ತೂರು ಚನ್ನಮ್ಮಾಜಿಯ ಚಲೇಜಾವ್ ಘೋಷಣೆಯ, 200 ವರ್ಷ' ವಿಷಯ ಕುರಿತು, ಅವರು ಮಾತನಾಡಿದರು.

<><><>

ಡಾಕ್ಟರ್ ವಿನಯಾ ನಾಯಕ ಧ್ವನಿ 55 ಸೆಕೆಂದುಗಳು

<><><>

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ, ಭಾರತದ ಕುಸ್ತಿಪಟು ಅಮನ್ ಸಹರಾವತ ಕಂಚಿನ ಪದಕ ಗೆದ್ದಿದ್ದಾರೆ. 57 ಕಿಲೋ ವಿಭಾಗದಲ್ಲಿ ಪೋರ್ಟೋ ರಿಕೊ ಕುಸ್ತಿಪಟು, ಡೇರಿಯನ್ ಕ್ರೂಜ್ ಅವರನ್ನು 13–5 ಅಂಕಗಳಿಂದ ಸೋಲಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಐದನೇ ಕಂಚು ಮತ್ತು ಒಟ್ಟಾರೆ ಆರನೇ ಪದಕವಾಗಿದೆ.

<><><>

ಶ್ರಾವಣ ಮಾಸದ ಶುಕ್ಲಪಕ್ಷದ, ನಾಗರ ಪಂಚಮಿ ಹಬ್ಬವನ್ನು, ನಾಡಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಶ್ರಾವಣ ಮಾಸದ ಹಬ್ಬಗಳ ಸಾಲಿನ ಮೊದಲ ಹಬ್ಬ ನಾಗರ ಪಂಚಮಿಯನ್ನು, ನಾಗರಕಲ್ಲುಗಳಿಗೆ ಹಾಗೂ ಹುತ್ತಗಳಿಗೆ ಪೂಜೆ ಸಲ್ಲಿಸಿ, ತನಿ ಎರೆದು, ಹೆಂಗಳೆಯರು ಆಚರಿಸಿದರು.

<><><>

ದಕ್ಷಿಣಕನ್ನಡ ಜಿಲ್ಲೆಯ ಪ್ರಮುಖ ನಾಗಾರಾಧನೆಯ ಕ್ಷೇತ್ರ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ, ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.

<><><>

ದೊಡ್ಡಬಳ್ಳಾಪುರ ತಾಲೂಕಿನ ಘಾಟಿ ಸುಬ್ರಹ್ಮಣ್ಯಸ್ವಾಮಿ ಕ್ಷೇತ್ರದ ನಾಗರಕಲ್ಲುಗಳಿಗೆ ಭಕ್ತಾದಿಗಳು ಹಾಲೆರೆದು ಪೂಜೆ ಸಲ್ಲಿಸಿದರು.

<><><>

ಮೈಸೂರು ದಸರಾ ಪ್ರಧಾನ ಆಕ ´ಣೆ ಜಂಬೂ ಸವಾರಿ. ಇದೇ 21 ರಂದು ವೀರನ ಹೊಸಳ್ಳಿಯಿಂದ, ವಿಧ್ಯುಕ್ತವಾಗಿ ಗಜ ಪಯಣ ಆರಂಭವಾಗಲಿದೆ ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಮೈಸೂರು ಮೃಗಾಲಯದಲ್ಲಿ ಹುಲಿ ಮನೆಯ ವೀಕ್ಷಣಾ ಗ್ಯಾಲರಿ ಉದ್ಘಾಟಿಸಿ ಅವರು ಮಾತನಾಡಿದರು. ನಾಡಿದ್ದು, 12 ರಂದು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಜಿ.ಕೆ.ವಿ.ಕೆ ಆವರಣದಲ್ಲಿ, ವಿಶ್ವ ಆನೆ ದಿನದ ಅಂಗವಾಗಿ, ಮಾನವ, ಆನೆ ಸಂಘ ´ ನಿರ್ವಹಣೆ ಕುರಿತಂತೆ, ಅಂತಾರಾಷ್ಟ್ರೀಯ ಸಮಾವೇಶ ನಡೆಯಲಿದೆ.

ಅಂದು ಮಧ್ಯಾಹ್ನ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ಜರುಗಲಿದೆ ಎಂದು ಸಚಿವರು ಹೇಳಿದರು.

<><><>

ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿ, ಕಳೆದ 2023 ರಿಂದ ರಾಜ್ಯ ಮಟ್ಟದಲ್ಲಿ ಬಾಕಿ ಇದ್ದ, ಎಂಟು ಸಾವಿರ ಪ್ರಕರಣಗಳಲ್ಲಿ, 5 ಸಾವಿರದ 100 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ ಭಟ್ ತಿಳಿಸಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಸಭೆ ನಡೆಸಿದ ಅವರು, 2 ಸಾವಿರದ 900 ಪ್ರಕರಣಗಳು ವಿಲೇವಾರಿ ಹಂತದಲ್ಲಿವೆ ಎಂದರು. ಧಾರವಾಡ ಜಿಲ್ಲೆಯಲ್ಲಿ ಇಲ್ಲಿಯ ವರೆಗೆ ಒಟ್ಟು 46 ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳು ದಾಖಲಾಗಿವೆ. 22 ಪ್ರಕರಣಗಳನ್ನು ಪರಿಹರಿಸಬೇಕಿದೆ. 18 ಪ್ರಕರಣಗಳು ಜಿಲ್ಲಾ ಮಟ್ಟದಲ್ಲಿ ಬಾಕಿ ಇವೆ ಎಂದು ಅವರು ಹೇಳಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು ವಿಶ್ವ 'ಸಿಂಹಗಳ ದಿನ'. ಸಿಂಹಗಳ ಬದುಕು, ಬವಣೆ ಹಾಗೂ ಅವುಗಳ ಸಂರಕ್ಷಣೆ ಕುರಿತು, ಜನ ಸಾಮಾನ್ಯರಲ್ಲಿ ತಿಳಿವಳಿಕೆ ಮೂಡಿಸುವ ಉದ್ದೇಶದೊಂದಿಗೆ, ಆಚರಿಸಲಾಗುತ್ತದೆ.

<><><>

ಇಸ್ರೋ ಸಂಸ್ಥೆಯ ವಿಶ್ರಾಂತ ಅಧ್ಯಕ್ಷ, ಎ.ಎಸ್. ಕಿರಣಕುಮಾರ, ಗದಗ ಹೆಲ್ತ್ ಕ್ಯಾಂಪ್‌ನಲ್ಲಿರುವ ತಾರಾಲಯಕ್ಕೆ ಭೇಟಿ ನೀಡಿ, ವೀಕ್ಷಿಸಿದರು.

<><><>

ಯಾದಗಿರಿ ನಗರ ಠಾಣೆ ಪಿ.ಎಸ್.ಐ ಪರಶುರಾಮ ಅವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿ, ಸಿ.ಐ.ಡಿ. ತಂಡ, ತನಿಖೆಯನ್ನು ಮುಂದುವರಿಸಿದೆ.

<><><>

ಕೋಲಾರ ಜಿಲ್ಲೆ ಬೇತಮಂಗಲದ, ಸಮುದಾಯ ಆರೋಗ್ಯ ಕೇಂದ್ರ, ಉತ್ತಮ ಆರೋಗ್ಯ ಸೇವೆ ಮತ್ತು ಸಾಧನೆಗಾಗಿ, ರಾಷ್ಟ್ರ ಮಟ್ಟದ ಮಾನ್ಯತೆ ಪಡೆದಿದೆ.

<><><>

ಡಿ.ದೇವರಾಜ ಅರಸು ಅವರ, 109ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು, ಬರುವ 20ನೇ ತಾರೀಖು, ಶಿವಮೊಗ್ಗದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಹರ್ ಘರ್ ತಿರಂಗಾ ಅಭಿಯಾನ', ಜನಾಂದೋಲನವಾಗಲಿ – ಪ್ರಧಾನಮಂತ್ರಿ ನರೇಂದ್ರ ಮೋದಿ, ಕರೆ.
- 'ಕ್ವಿಟ್ ಇಂಡಿಯಾ ಚಳವಳಿ' ಸ್ಮರಣೆ; ರಾಜ್ಯಾದ್ಯಂತ ವಿಧಾಯಕ ಕಾರ್ಯಕ್ರಮಗಳು.
- ಪ್ಯಾರಿಸ್ ಒಲಿಂಪಿಕ್ಸ್; ಭಾರತದ ಕುಸ್ತಿಪಟು ಅಮನ್ ಸಹರಾವತ್ ಕೊರಳಿಗೆ ಕಂಚಿನ ಪದಕ.
- ನಾಗರ ಪಂಚಮಿ ಹಬ್ಬ; ನಾಡಿನಾದ್ಯಂತ ಸಂಭ್ರಮ, ಸಡಗರದಿಂದ ಆಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.

<><><>

ಹರ್ಷ